

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ.ವಿನೋದ ಛಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

**ಶಿಶ್ನವನ್ನು ದೊಡ್ಡದು ಮಾಡಲು ಉಪಾಯವಿದೆಯೆ?**

ಬಹಳ ಗಂಡಸರು ತಮ್ಮ ಶಿಶ್ನವನ್ನು ಉದ್ದ ಮಾಡಿಸಿಕೊಳ್ಳುವ ಉದ್ದೇಶದಿಂದ ನನ್ನ ಹತ್ತಿರ ಬಂದಿದ್ದಾರೆ. ಆದರೆ ದುರದೃಷ್ಟವಶಾತ್ ಶಿಶ್ನವನ್ನು ಉದ್ದ ಮಾಡುವುದಕ್ಕೆ ಯಾವ ಔಷಧಿಗಳು ಅಥವಾ ಸಾಧನಗಳು ಲಭ್ಯವಿಲ್ಲ. ಇಂಟರ್‌ನೆಟ್ ಮತ್ತು ಜಾಹೀರಾತುಗಳಲ್ಲಿ ಕಂಡುಬರುವ ಔಷಧಿ, ತೈಲಗಳು ಯಾವುದೂ ಎಳ್ಳಷ್ಟೂ ಕೆಲಸ ಮಾಡುವುದಿಲ್ಲ – ಇದೊಂದು ಮೋಸದ ವ್ಯಾಪಾರವಷ್ಟೆ!

ಶಿಶ್ನವನ್ನು ಉದ್ದ ಮಾಡುವುದೆಂದು ಹೇಳಿಕೊಳ್ಳುವ ಸಾಧನಗಳು ಎಳೆಯುವ ಮೂಲಕ ಮೆತ್ತಗಿರುವ ಶಿಶ್ನವನ್ನು ಅದೂ ತಾತ್ಕಾಲಿಕವಾಗಿ ಉದ್ದ ಮಾಡುತ್ತವೆಯೇ ವಿನಾ ಉದ್ರಿಕ್ತ ಶಿಶ್ನವನ್ನಲ್ಲ. ಉಪಯೋಗ ನಿಲ್ಲಿಸಿದ ನಂತರ ಮೆತ್ತಗಿನ ಶಿಶ್ನವು ಯಥಾಸ್ಥಿತಿಗೆ ಮರಳುತ್ತದೆ. ಅಲ್ಲದೆ ಈ ಸಾಧನಗಳನ್ನು ಉಪಯೋಗಿಸಿದ ಹಲವಾರು ಪುರುಷರಲ್ಲಿ ಜನನಾಂಗದೊಳಗಿನ ನಿಮಿರುವ ವ್ಯವಸ್ಥೆಗೆ ಹಾನಿಯಾಗಿ ನಿಮಿರುದೌರ್ಬಲ್ಯ ಕಂಡುಬಂದಿದೆ. ಇನ್ನು, ಉದ್ರಿಕ್ತ ಶಿಶ್ನದ ಉದ್ದಗೊಳಿಸಲು ಶಸ್ತ್ರಚಿಕಿತ್ಸೆಯೇನೋ ಇದೆ. ಇದರಲ್ಲಿ ಶಿಶ್ನವು ಮುಂದುಗಡೆ ಮೂಳೆಗೆ ಅಂಟಿಕೊಂಡಿರುವ ನಾರನ್ನು ಬೇರ್ಪಡಿಸುವ ಮೂಲಕ ಮೂಳೆಯ ಹಿಂದಿರುವ ಶಿಶ್ನದ ಸ್ವಲ್ಪ ಭಾಗವನ್ನು (ಸುಮಾರು ಅರ್ಧದಿಂದ ಒಂದು ಅಂಗುಲ) ಹೊರಗೆ ತರಲಾಗುತ್ತದೆ. ಇದು ಕಾಯಂ ಆದ ಚಿಕಿತ್ಸೆ ಆದರೂ ಶಿಶ್ನವು ತನ್ನ ಮುಂಚಿನ ಬುಡಹಿಡಿತವನ್ನು ಕಳೆದುಕೊಳ್ಳುವುದರಿಂದ ಬುಡ ಸಡಿಲವಾದ ಗೂಟದಂತೆ ಅಲುಗಾಡುತ್ತದೆ. ಹೀಗಾಗಿ ಇದರಲ್ಲಿ ಅತೃಪ್ತಿಯ ಸಂಭವ ಶೇ.70ರಷ್ಟಿದೆ!

ಒಟ್ಟಿನಲ್ಲಿ ಶಿಶ್ನವನ್ನು ಉದ್ದಮಾಡುವ ಯಾವ ಉಪಾಯವೂ ನಿರೀಕ್ಷಿತ ಫಲ ಕೊಡಲಾರದೆಂದು ಸ್ಪಷ್ಟವಾಗಿ ಹೇಳಬಹುದು. ಇನ್ನು ಕೆಲವರು ಹೊಟ್ಟೆ ಬೆಳೆಸಿಕೊಂಡು ವಿಪರೀತ ದಪ್ಪಗಿರುವಾಗ ಶಿಶ್ನದ ಬುಡದ ಸುತ್ತಲೂ ಕೊಬ್ಬಿನಂಶವು ಸಂಗ್ರಹಗೊಂಡು ಅದರೊಳಗೆ ಶಿಶ್ನವು ಅಡಗಿಕೊಂಡು ಉದ್ದ ಕಡಿಮೆಯಾದಂತೆ ಕಾಣುತ್ತದೆ. ಹೀಗಿದ್ದರೆ ಶಸ್ತ್ರಚಿಕಿತ್ಸೆಯ (ಲೈಪೋಸಕ್ಷನ್) ಮೂಲಕ ಕೊಬ್ಬನ್ನು ಸೆಳೆದು ಖಾಲಿ ಮಾಡುವುದರಿಂದ ಸಿಕ್ಕಿಹಾಕಿಕೊಂಡ ಶಿಶ್ನವನ್ನು ಹೊರತೆಗೆಯಬಹುದು. ಕೊನೆಯದಾಗಿ, ಸಣ್ಣಗಿರುವ ಶಿಶ್ನವನ್ನು ದಪ್ಪಗೆ ಮಾಡಿ ಉದ್ರಿಕ್ತ ಶಿಶ್ನದ ಸುತ್ತಳತೆಯನ್ನು ಹೆಚ್ಚು ಮಾಡಬಹುದು. ಇದಕ್ಕಾಗಿ ಶಸ್ತ್ರಚಿಕಿತ್ಸೆಯಿದೆ. ಇದರಲ್ಲಿ ಶಿಶ್ನದ ಒಳಪದರದಲ್ಲಿ ಸಿಲಿಕೋನ್ ಅಥವಾ ಕೊಬ್ಬಿನ ಅಂಗಾಂಶವನ್ನು ಸೇರಿಸುತ್ತಾರೆ. ಇದರಿಂದ ಶಿಶ್ನವು ಅರ್ಧದಿಂದ ಒಂದು ಅಂಗುಲದಷ್ಟು ಸುತ್ತಳತೆಯಲ್ಲಿ ಹೆಚ್ಚಾಗುವ ಸಾಧ್ಯತೆಯಿದೆ. ವಿವರಗಳಿಗಾಗಿ ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್‌ನಲ್ಲಿ (ದೂ.080 23101205, 23111666) ವಿಚಾರಿಸಬಹುದು. ಮುಖ್ಯವಾದ ವಿಷಯವೇನೆಂದರೆ ಹೆಣ್ಣಿನ ಜನನಾಂಗದ ಸ್ಪರ್ಶತಂತುಗಳು ಯೋನಿಯ ಹೊರಭಾಗ ಮತ್ತು ಒಂದು ಅಂಗುಲ ಆಳದವರೆಗೂ ಇವೆ. ಇದನ್ನು ಮುಟ್ಟಲು ದೊಡ್ಡ ಶಿಶ್ನ ಯಾಕೆ? ಕೊನೆಯದಾಗಿ ಪುರುಷರಿಗೊಂದು ಕಿವಿಮಾತು: ಭಾರತೀಯರಲ್ಲಿ ಉದ್ರಿಕ್ತ ಶಿಶ್ನದ ಸರಾಸರಿ ಉದ್ದ ನಾಲ್ಕು ಅಂಗುಲ. ಕನಿಷ್ಠ ಎರಡೂವರೆ ಅಂಗುಲ ಉದ್ದ ಶಿಶ್ನವಿದ್ದವರೂ ಚೆನ್ನಾಗಿ ಬಾಳಿಬದುಕಿದ್ದನ್ನು ನೋಡಿದ್ದೇನೆ. ಹಾಗಾಗಿ ಪುರುಷರು ತಮ್ಮ ಶಿಶ್ನವನ್ನು ಉದ್ದಮಾಡಿ ಹೆಣ್ಣಿಗೆ ಪ್ರದರ್ಶನ ನೀಡುವ ಹಂಬಲ ಬಿಟ್ಟು ಇದ್ದುದನ್ನೇ ಸರಿಯಾಗಿ ಉಪಯೋಗಿಸಿ ಅವಳನ್ನು ಸುಖವಾಗಿಡುವುದನ್ನು ಕಲಿಯುವುದು ಮುಖ್ಯ. ಇದಕ್ಕಾಗಿ ಹೊಟ್ಟೆ ಬೆಳೆಸಿಕೊಳ್ಳದೆ ತೆಳುವಾಗಿದ್ದರೆ ಸಾಕು!

**ಸಂಭೋಗದ ಸುಖಕ್ಕೂ ಹಸ್ತಮೈಥುನದ ಸುಖಕ್ಕೂ ವ್ಯತ್ಯಾಸವಿದೆಯೆ? ಅಥವಾ ಎರಡೂ ಒಂದೇಯೆ?**

ಹೌದು ಮತ್ತು ಇಲ್ಲ! ಎರಡರ ಅಂತಿಮ ಪರಿಣಾಮ (ಭಾವಪ್ರಾಪ್ತಿ) ಒಂದೇ. ಹಾಗಿದ್ದರೂ ಎರಡರಲ್ಲೂ ಸಿಗುವ ಸಂತೃಪ್ತಿ ಭಿನ್ನವಾಗಿರುತ್ತದೆ. ಇದು ಹೇಗೆಂದರೆ, ಹಸ್ತಮೈಥುನವು ಒಂಟಿಯಾಗಿ ತೊಡಗುವ ಕ್ರಿಯೆ. ಹಾಗಾಗಿ ಎಲ್ಲವೂ ತಾನು ಬಯಸಿದ ರೀತಿಯಲ್ಲಿ ತನ್ನ ನಿರೀಕ್ಷೆಗೆ ತಕ್ಕಂತೆ ನಡೆಯುತ್ತ ಭಾವಪ್ರಾಪ್ತಿ ಆಗುತ್ತದೆ. ನಂತರ ಕ್ರಿಯೆ ನೀರಸವಾಗಿ ಅನಗತ್ಯವಾಗಿ ಕಂಡು ಅರ್ಥ ಕಳೆದುಕೊಳ್ಳುತ್ತದೆ. ಆದರೆ ಸಂಭೋಗ ಹಾಗಲ್ಲ. ಅದರಲ್ಲಿ ಎರಡು ರೀತಿಯ ಸಂವೇದನೆಗಳು ಕೆಲಸ ಮಾಡುತ್ತವೆ. ತಾನು ತನ್ನ ಸಂಗಾತಿಯ ಜೊತೆಗೆ ನಡೆದುಕೊಳ್ಳುವುದರಿಂದ ಸಿಗುವ ನಿರೀಕ್ಷಿತ ಸಂವೇದನೆಗಳು, ಹಾಗೂ ತನ್ನ ಸಂಗಾತಿಯು ತನ್ನ ಜೊತೆಗೆ ನಡೆದುಕೊಳ್ಳುವುದರಿಂದ ಸಿಗುವ ಅನಿರೀಕ್ಷಿತ ಸಂವೇದನೆಗಳು. ಇವೆರಡು ಅನುಭವಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕಾದರೆ ಹೀಗೆ ಮಾಡಿ: ನಿಮ್ಮ ಕಂಕುಳಲ್ಲಿ ನೀವೇ ಬೆರಳಾಡಿಸಿಕೊಂಡು ನೋಡಿ; ನಂತರ ಇನ್ನೊಬ್ಬರಿಂದ ಅದನ್ನೇ ಮಾಡಿಸಿಕೊಂಡು ನೋಡಿ. ಒಂದನೆಯದರಲ್ಲಿ ಕೆರೆತದ ಅನುಭವ ಕಂಡರೆ ಎರಡನೆಯದರಲ್ಲಿ ಕಚಕುಳಿಯ ಅನುಭವ ಆಗುತ್ತದೆ– ಯಾಕೆಂದರೆ ಬೇರೆಯವರ ಬೆರಳಿನ ಚಲನೆಯ ಹಿಡಿತ ನಮ್ಮ ಕೈಯಲ್ಲಿರುವುದಿಲ್ಲವಲ್ಲ? ಹೀಗೆ ನಿರೀಕ್ಷಿತ ಹಾಗೂ ಅನಿರೀಕ್ಷಿತ ಸ್ಪರ್ಶಭಾವಗಳು ಒಂದನ್ನೊಂದು ಮೇಳೈಸುತ್ತ ಸುಂಟರಗಾಳಿಯಂತೆ ಮೇಲೇರುವುದರಿಂದ ಸಂಭೋಗದ ಅನುಭವ ಅದ್ಭುತವಾಗಿರುತ್ತದೆ. ಭಾವಪ್ರಾಪ್ತಿಯ ನಂತರ ಆದ ಅನುಭವವನ್ನು ಸಂಗಾತಿಯೊಡನೆ ಹಂಚಿಕೊಳ್ಳುತ್ತ ನನ್ನ ಅದ್ಭುತ ಅನುಭವಕ್ಕೆ ನೀನೇ ಕಾರಣ! ಎಂದು ತೋರಿಸುವಾಗ ಏಕಾಭಿಪ್ರಾಯ ಉಂಟಾಗಿ, ಸಂಬಂಧವು ಅರ್ಥವತ್ತಾಗುತ್ತ, ಬಂಧನ ಗಟ್ಟಿಯಾಗುತ್ತದಲ್ಲದೆ ಆತ್ಮವಿಶ್ವಾಸ ಬೆಳೆಯುತ್ತದೆ. ಆದರೆ ಇದಕ್ಕೆಲ್ಲ ಸೂಕ್ತ ಸಂಗಾತಿ ಬೇಕೇಬೇಕು. ಅದಿಲ್ಲದಿದ್ದರೆ ಸಂಭೋಗವೂ ಹಸ್ತಮೈಥುನದ ತರಹ ತನಗಾಗಿ ತಾನೇ ಮಾಡುವ ಒಂಟಿಗೆಲಸ ಎಂದೆನಿಸುತ್ತದೆ – ಒಂದೇ ಊಟವನ್ನು ಗಂಡಹೆಂಡತಿ ಇಬ್ಬರೂ ಮಾತಾಡದೆ ತಮ್ಮಷ್ಟಕ್ಕೆ ತಾವು ಮಾಡಿದ ಹಾಗೆ.

ಹೀಗೆ ಹಸ್ತಮೈಥುನ ಮತ್ತು ಸಂಭೋಗಗಳು ಬೇರೆಯಾಗಿವೆ. ಇನ್ನು, ಹಸ್ತಮೈಥುನ ಹಾಗೂ ಸಂಗಾತಿ ಇವೆರಡನ್ನೂ ಸೇರಿಸಿದರೆ ಹೇಗೆ? ಉದಾಹರಣೆಗಾಗಿ, ಸಂಗಾತಿಯ ಕೈಯಿಂದ ಹಸ್ತಮೈಥುನ ಮಾಡಿಸಿಕೊಳ್ಳುವಾಗ ಅದೊಂದು ರೋಚಕ ಅನುಭವವಾಗುತ್ತದೆ. ಮುಟ್ಟಿನ ದಿನಗಳಲ್ಲಿ ಸಂಭೋಗ ಕಷ್ಟಸಾಧ್ಯವಾದಾಗ ಗಂಡಿಗೆ ಹೆಣ್ಣು ಮಾಡುವುದಾಗಲೀ, ಹೆಣ್ಣು ಭಾವಪ್ರಾಪ್ತಿ ಹೊಂದಲು ಗಂಡು ತನ್ನ ಬೆರಳುಗಳಿಂದ ಹೆಣ್ಣಿನ ಜನನಾಂಗವನ್ನು ತೀಡುವುದಾಗಲೀ ಹಸ್ತಮೈಥುನವಾದರೂ ಸ್ಪರ್ಶವು ಸಂಗಾತಿಯಿಂದ ಬರುವುದರಿಂದ ಪರಸ್ಪರ ಎನ್ನಿಸಿಕೊಳ್ಳುತ್ತ ಬೇರೆ ಅನುಭವವನ್ನೇ ಕೊಡುತ್ತದೆ. ಇದೆಲ್ಲವನ್ನೂ ಮೀರಿ ಇನ್ನೊಂದಿದೆ: ಸಂಗಾತಿಗಳಿಬ್ಬರೂ ನಗ್ನರಾಗಿ ಎದುರುಬದುರು ಸ್ವಲ್ಪ ದೂರ ಕುಳಿತು ಒಬ್ಬರನ್ನೊಬ್ಬರು ದೃಷ್ಟಿಸುತ್ತ, ಮಾತಾಡುತ್ತ ಆದರೆ ಪರಸ್ಪರ ಸ್ಪರ್ಶ ಮಾಡದೆ – ತಮ್ಮಷ್ಟಕ್ಕೆ ತಾವೇ ಹಸ್ತಮೈಥುನ ಮಾಡಿಕೊಳ್ಳುವುದು. ಸ್ವಲ್ಪ ದಿಟ್ಟತನ ಮತ್ತು ಪ್ರಯೋಗಶೀಲತೆಯಿಂದ ಇದನ್ನು ಮಾಡಿನೋಡಿ: ಸಂಗಾತಿಯ ಸನ್ನಿಧಿಯಲ್ಲಿ ತನ್ನನ್ನು ತಾನೇ ಒಂಟಿಯಾಗಿ ತೆರೆದುಕೊಳ್ಳುವಾಗ ಆಗುವ ಅನುಭವ ಅನಿರ್ವಚನೀಯ!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**